ಓ ಎಸ್ ನಂಬರ 105/2025
ಪಿ.ಡಬ್ಲ್ಯೂ 1

**ದಿನಾಂಕ: 27.04.2026.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:

ನಾನು ಈ ದಾವೆಯಲ್ಲಿ ನಾನು ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆ ಬದಲಿಗೆ ಅಫಿಡೆವಿಟನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸತ್ಯವಾಗಿರುತ್ತವೆ. ಓದಿ ನೋಡಿ ಸಹಿ ಮಾಡಿದ್ದೇನೆ.

ಮೂರು ಜಾತಿ ಹಾಗೂ ಜನ್ಮ ದಿನಾಂಕ ಪ್ರಮಾಣ ಪತ್ರಗಳು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **1** ರಿಂದ **3** ಎಂದು, **10**ನೇ ತರಗತಿ ಅಂಕಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **4** ಎಂದು, ಐಟಿಐ ಅಂಕಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **5** ಎಂದು, ಚಾಲನಾ ಪರವಾಣಿಗೆ ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **6** ಎಂದು, ಆಧಾರ ಕಾರ್ಡ ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **7** ಎಂದು, ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ **8** ಎಂದು, ಗುರುತಿಸಲಾಯಿತು.

**ಪಾಟೀ ಸವಾಲು: ಮಾನ್ಯ ಎ ಜಿ ಪಿ ರವರಿಂದ:**

ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ನಾನು ಐಟಿಐ ಓದಿರುತ್ತೇನೆ. ನಾನು ಹೊಲದಲ್ಲಿ ಕೂಲಿ ಕೆಲಸ ಮಾಡುತ್ತೇನೆ. ದಾವೆಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅಡ್ಡ ಹೆಸರು ಬದಲಾವಣೆ ಕೋರಿ ದಾವೆ ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯ ನನಗೆ ಗೊತ್ತಿರುತ್ತದೆ. ನಾನು **2008-09** ರಲ್ಲಿ **10** ನೇ ತರಗತಿ ಮುಗಿಸಿರುತ್ತೇನೆ. ಎಸ್ ಎಸ್ ಎಲ್ ಸಿ ಬಳಿಕ ಶಾಲಾ ವರ್ಗಾವಣಾ ಪ್ರಮಾಣ ಪತ್ರವನ್ನು ನನ್ನ ಬಳಿಯೇ ನೀಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಶಾನೆ ಪಿ **4 2009** ರಲ್ಲಿ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿಯೇ ನನ್ನ ಅಡ್ಡಹೆಸರು ಹಾಗೂ ನನ್ನ ತಂದೆಯ ಹೆಸರು ಬದಲಾಗಿರುತ್ತದೆ ಎಂದರೆ ಸರಿ. ಅಂತೆಯೇ ನಿಶಾನೆ ಪಿ **5** ರಲ್ಲಿಯು ಸಹ ನನ್ನ ಅಡ್ಡಹೆಸರು ಹಾಗೂ ನನ್ನ ತಂದೆಯ ಹೆಸರು ಬದಲಾಗಿರುತ್ತದೆ ಎಂದರೆ ಸರಿ. ಸದರಿ ವಿಷಯ ನನಗೆ **2008** ಹಾಗೂ **2011** ರಲ್ಲಿಯೇ ತಿಳಿದಿರುತ್ತದೆ ಎಂದರೆ ಸರಿ. ನನ್ನ ಆಧಾರ ಕಾರ್ಡನಲ್ಲಿ ದಾಖಲಿಸುವ ಕಾಲದಲ್ಲಿ ನನ್ನ ಯಾವುದೇ ಶಾಲಾ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಚಾಲನಾಪರವಾನಿಗೆ ಕಾಲದಲ್ಲಿ ಶಾಲಾ ದಾಖಲಾತಿಯನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಆಧಾರ ಕಾರ್ಡನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ನನ್ನ ಅಡ್ಡಹೆಸರು ಹಾಗೂ ನನ್ನ ತಂದೆಯ ಹೆಸರು ಬದಲಾವಣೆ ಕೋರಿ ಸಲ್ಲಿಸಿರುತ್ತೇನೆ. ಆಧಾರ ಕಾರ್ಡನ್ನು ನನಗೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡು ಅದರ ಆಧಾರದ ಮೇಲೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಡ್ಡಹೆಸರು ದೊಡಮನಿ ಎಂದು

ಇರುವ ಕಾರಣ ಯಾವುದೇ ಸರ್ಕಾರದ ಸೌಲಭ್ಯ ಪಡೆಯಲು ಆಗುತ್ತಿಲ್ಲ ಹಾಗೂ ನನ್ನ ಮಕ್ಕಳಿಗೆ ಮುಂದೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ನನ್ನ ಅಡ್ಡಹೆಸರನ್ನು ಬದಲಾವಣೆ ಕೋರಿರುತ್ತೇನೆ ಎಂದರೆ ಸರಿ.

ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ತಂದೆ ತಾಯಿ ಮಾಹಿತಿಯನ್ನು ನೀಡಿರುತ್ತಾರೆ. ಶಾಲೆಯಲ್ಲಿ ನಾವು ನೀಡುವ ಆಧಾರದ ಮೇಲೆ ವಿವರಗಳನ್ನು ದಾಖಲಾಸಿಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ನೀಡಿದ ವಿವರಗಳನ್ನು ಪ್ರತಿವಾದಿಯರು ತಪ್ಪಾಗಿ ನಮೂದಿಸಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಶಾಲೆಯಲ್ಲಿ ನಮ್ಮ ಮನೆತನದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾವು ನೀಡುವ ಮಾಹಿತಿಯನ್ನೇ ದಾಖಲಿಸಿಕೊಳ್ಳುತ್ತಾರೆ ಎಂದರೆ ಸರಿ. ಪ್ರತಿವಾದಿ ಸಂಖ್ಯೆ **1** ರಿಂದ **7** ಹಾಗೂ **9** ರವರಿಂದ ಯಾವುದೇ ತಪ್ಪಿ ನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. **2009** ಮತ್ತು **2011** ರಲ್ಲಿಯೇ ವಿಷಯ ತಿಳಿದಿದ್ದರು ಸಹ ಅನ್ನತಾ ಪಾಯಿತೆ ಹೊಂದುವ ಉದ್ದೇಶದಿಂದ ತಡವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ